ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎನ್‌ರೋಲ್‌ಮೆಂಟ್ ನಂಬರ್.

Sri K. H. PATIL.—Are the Government aware that many of the applications from lady teachers have been rejected on the ground that there are no vacancies ? So, will the Government consider the question of enrolling as many lady candidates as are avoilable and see that they are employed ?

Sri N. M. KOTRABASIAH SOGI.—No such instances have come to the notice of the Government. Anyway, we are giving all preference to lady candidates and we are appointing all the qualified lady candidates.

Increase in tuition fees in Commerce Schools

949. Sri T. R. SHAMANNA (Fort).—

Will the Minister for Education be pleased to state :—

(*a*) whether the Mysore State Commerce Institutes' Association had made a proposal that the rates of tuition fee in the case of Commerce subjects in Commerce Schools may be increased by Re. 1 ;

(*b*) if so, the action taken by Government in the matter ;

(*c*) the number of Commerce Schools functioning in the city and State and the number of them that are given Government grants ;

(*d*) the total number of students studying in those Schools ?

Sri N. M. KOTRABASAIAH SOGI (Deputy Minister for Education).—

(*a*) Yes, at different rates of increase.

(*b*) the proposal has been turned down.

(*c*) (i) In City ... 99
(ii) In State ... 302
(iii) Those receiving grants 6

(*d*) 50,369.

ಶ್ರೀ ಟಿ. ಆರ್. ಶಾಮಣ್ಣ.—ವಾಣಿಜ್ಯ ಸಂಸ್ಥೆಗಳಿಗೆ ಹೆಚ್ಚುವರಿ ಶುಲ್ಕದಾವನ್ನು ಕೊಡುವುದನ್ನು ನಿರಾಕರಿಸಿದೆ ಎಂದು ಹೇಳಿದ್ದಾರೆ. ಯಾವ ಕಾರಣದಿಂದ ನಿರಾಕರಿಸಲಾಗಿದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಇರುವ ಶುಲ್ಕವೇ ಸಾಕಷ್ಟು ಇವೆ. ಅದಕ್ಕಿಂತ ಹೆಚ್ಚಿಗೆ ಮಾಡಿದರೆ ವಾಪಸಂಗ ಮಾಡುವವರ ತಂದೆತಾಯಿಗಳಿಗೆ ಹೆಚ್ಚಿನ ಭಾರ ಆಗುತ್ತದೆ ಎನ್ನುವುದು ಒಂದು; ಮೇಲಾಗಿ ಈಗಿರತಕ್ಕ ಶುಲ್ಕದಿಂದಲೇ ಮ್ಯಾನೇಜ್‌ಮೆಂಟ್ ಸರಿಯಾದ ರೀತಿಯಲ್ಲಿ ಕೆಲಸ ನಡೆಸುತ್ತಿದೆ, ಅದನ್ನು ಹೆಚ್ಚು ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ರಾಜ್ಯದಲ್ಲಿರುವ 302 ವಾಣಿಜ್ಯ ಶಾಲೆಗಳಲ್ಲಿ 50 ಸಾವಿರಕ್ಕಿಂತ ಹೆಚ್ಚು ಜನ ವ್ಯಾಸಂಗ ಮಾಡುತ್ತಿದ್ದಾರೆ. 302 ಸಂಸ್ಥೆಗಳಲ್ಲಿ ಕೇವಲ ಆರು ಸಂಸ್ಥೆಗಳಿಗೆ ಮಾತ್ರ ಗ್ರಾಂಟ್ ಒದಗುತ್ತಿದೆ. ಎಷ್ಟು ಗ್ರಾಂಟ್ ಕೊಡುತ್ತಿದ್ದೀರಿ ಎನ್ನುವುದನ್ನು ತಿಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಿರ್ದಿಷ್ಟವಾಗಿ ಇಷ್ಟು ಎಂದಿಲ್ಲ. ಆಡ್‌ಹಾಕ್ ಗ್ರಾಂಟ್ ಕೊಡಲಾಗುತ್ತಿದೆ. ಗ್ರಾಂಟ್ ಇನ್ ಏಡ್ ಕೋಡ್ ಮಾಡಬೇಕೆಂಬ ವಿಚಾರ ಸರ್ಕಾರಕ್ಕೆ ಇದೆ. ಒಂದು ಸಂಸ್ಥೆಗೆ ಸುಮಾರು 400 ರೂಪಾಯಿ ಕೊಡಬೇಕು ಎನ್ನುವ ಪದ್ಧತಿಯನ್ನು ಸರ್ಕಾರ ಅನುಸರಿಸಿಕೊಂಡು ಬರುತ್ತಿದೆ. ಮ್ಯಾನೇಜ್‌ಮೆಂಟ್‌ನವರಿಗೆ ಆಗಿರತಕ್ಕ ಖರ್ಚಿನಲ್ಲಿ 75 ಪರ್ಸೆಂಟ್ ಗ್ರಾಂಟ್ ರೂಪದಲ್ಲಿ ಕೊಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—75 ಪರ್ಸೆಂಟ್ ಗ್ರಾಂಟ್ ಕೊಡಲಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದರಲ್ಲಿ ಒಂದು ನ್ಯೂನತೆ ಇರುವುದರಿಂದ ಅನೇಕ ಶಾಲೆಗಳಿಗೆ ಗ್ರಾಂಟ್ ಬರುತ್ತಿಲ್ಲ. ಆದ್ದರಿಂದ ವಾಣಿಜ್ಯ ಶಾಲೆಗಳಿಗೆ ಸಂಬಂಧಪಟ್ಟಂತೆ ಗ್ರಾಂಟ್ ಕೊಡುವ ನಿಯಮವನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಬಹುತೇಕ ವಾಣಿಜ್ಯ ಶಾಲಾ ಸಂಸ್ಥೆಗಳಿಗೆ ಯಾವುದೇ ವಿಧವಾದ ಗ್ರಾಂಟ್ ಕೊಡಬೇಕಾದ ಅವಶ್ಯಕತೆ ಇದೆ ಎಂದು ಕಂಡುಬಂದಿಲ್ಲ. ಕೇಳಿದಂಥ ಸಂಸ್ಥೆಗಳಿಗೆ ಗ್ರಾಂಟ್ ಕೊಟ್ಟಿದೆ. ಈಗಿರತಕ್ಕ ಸಂಸ್ಥೆಗಳು ಸಾಕಷ್ಟು ಕಾಂಪಿಟಿಷನ್ ಮೇಲೆ ನಡೆಯುತ್ತಿರುವುದರಿಂದಲೂ ಮತ್ತು ಅನೇಕ ಸಂಸ್ಥೆಗಳು ಸರ್ಕಾರದವರು ನಿಗದಿ ಮಾಡಿರುವ ಶುಲ್ಕಕ್ಕಿಂತ ಕಡಮೆ ಶುಲ್ಕವನ್ನು ತೆಗೆದುಕೊಂಡು ಪೈಪೋಟಿ ನಡೆಯುತ್ತಿರುವುದರಿಂದಲೂ ಗ್ರಾಂಟ್ ಕೊಡತಕ್ಕ ಅವಶ್ಯಕತೆ ಇದೆ ಎಂದು ಸರ್ಕಾರ ಮನಗಂಡಿಲ್ಲ. ಅವಶ್ಯಕತೆ ಇದ್ದ ಎಲ್ಲ ಸಂಸ್ಥೆಗಳಿಗೂ ಗ್ರಾಂಟ್ ಕೊಡಲಾಗಿದೆ.

Sri H. SIDDAVEERAPPA.—You said that the proposal has been turned down because in the view of the Government what is now fixed as tuition fee is sufficient. May I know whether they can collect donation instead of increase in tuition fee, because you seem to have no objection for collecting donation ?

Sri N. M. KOTRABASAIAH SOGI.—That is a matter between the institution concerned and the parents.

ಶ್ರೀ ಎಂ. ಎಸ್. ಕೃಷ್ಣನ್.—ವಾಣಿಜ್ಯ ಸಂಸ್ಥೆಗಳು ಅತಿ ಮುಖ್ಯವಾಗಿರುವುದರಿಂದ ಮತ್ತು ಈಗ ಪ್ರತಿಯೊಂದು ಶಾಲೆಗಳಲ್ಲೂ ಹೆಚ್ಚು ಫೀಜನ್ನು ವಸೂಲು ಮಾಡುತ್ತಿರುವುದರಿಂದ ಫೀಜು ಕಡಮೆಯಾಗುವ ದೃಷ್ಟಿಯಿಂದಲಾದರೂ ಕೂಡ ವಿಧಿನಿಯಮಗಳನ್ನು ಬದಲಾಯಿಸಿ ಗ್ರಾಂಟು ಎಲ್ಲ ಶಾಲೆಗಳಿಗೂ ಸಿಕ್ಕುವ ಹಾಗೆ ಮಾಡಲು ಸಾಧ್ಯವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಗ್ರಾಂಟು ಕೊಡಬೇಕೆಂಬ ದೃಷ್ಟಿಯಿಂದ ಬದಲಾಯಿಸಬೇಕಾದ ಅವಶ್ಯಕತೆಯಿಲ್ಲ. ಯಾವುದಾದರೂ ಸಂಸ್ಥೆಗೆ ಅವಶ್ಯಕತೆ ಇದ್ದರೆ ಕೊಡ ಬೇಕೆಂದು ಕೇಳಿದರೆ ವಿಚಾರಮಾಡಬಹುದು.

Sri D. B. KALMANKAR.—May I know whether the 6 inistitutions which receive grants are all located in Bangalore or they are located in district headquarters ?

Sri N. M. KOTRABASAIAH SOGI.—I want notice.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—302 ವಾಣಿಜ್ಯ ಶಾಲೆಗಳಲ್ಲಿ ಕೇವಲ 6ಕ್ಕೆ ಮಾತ್ರ ಗ್ರಾಂಟನ್ನು ಕೊಟ್ಟು ಉಳಿದವುಗಳಿಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಗಲೇ ಹೇಳಿದೆ. ಅವಶ್ಯವಿರುವ ಸಂಸ್ಥೆಗಳಿಗೆ ಕೊಡಲಾಗುವುದು. ಸರಕಾರದ ನಿಬಂಧನೆ ಪ್ರಕಾರ ಯಾವ ಸಂಸ್ಥೆ ಅದಕ್ಕನುಸಾರವಾಗಿ ನಡೆಯುವುದೋ ಅದಕ್ಕೆ ಕೇಳಿದರೆ ಕೊಡಲಾಗುವುದು.